# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ಬೆಂಗಳೂರು

********************************************

ಸಂಖ್ಯೆ: w-136/Committee/Proceding -33/2021-22 dt 07-03-2022

## ಸಭೆಯ ನಡವಳಿಗಳು

ಶ್ರೀ ಸತೀಶ್ ಕುಮಾರ್ ಸಮಿತಿಯ ಕಾರ್ಯದರ್ಶಿಗಳು ಸಭೆಯನ್ನು ನಡೆಸುತ್ತಾ ಸಭೆಯಲ್ಲಿ ಉಪಸ್ಥಿತಗೊಂಡಿರುವ ಮಾನ್ಯ ನೋಡಲ್ ಅಧಿಕಾರಿಗಳಿಗೆ ಮತ್ತು ಉನ್ನತ ಸಭೆಯಲ್ಲಿ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಕೋರಿದರು. ನಂತರ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

### ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬಂದಂತಹ ದೂರುಗಳು ಹಾಗೂ ಗ್ಯಾಂಗ್ ಮೆನ್ ಮತ್ತು ಟ್ರಾಕ್ಟರ್ ಮತ್ತು ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಂಡು ತಕ್ಷಣ ದೂರುಗಳನ್ನು ಪರಿಶೀಲಿಸಿ ಕಾರ್ಯನಿರ್ವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್-136ರ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ವಿವರವನ್ನು ನೀಡುವಂತೆ.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ 136 ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಎಸ್.ಸಿ/ಎಸ್‌ಟಿ ಜನ ಸಂಖ್ಯೆಯಿದ್ದು ವಾರ್ಡ್‌ನಲ್ಲಿ ಎರಡು ವರ್ಷಗಳಿಂದ ಮತ್ತು ಹಳೆಯ ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಎಸ್‌ಸಿ/ಎಸ್‌ಟಿ ಒಟ್ಟು 15 ಅರ್ಜಿಗಳು ಮತ್ತು ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರರು ಒಟ್ಟು 6 ಅರ್ಜಿಗಳನ್ನು ಸಲ್ಲಿಸಿರುವುದನ್ನು ಸಭೆಯಲ್ಲಿ ತಿಳಿಸಿದರು.

..2

ಸದರಿ ಫಲಾನುಭವಿಗಳಿಗೆ 2022-23ನೇ ಸಾಲಿನ ಆಯವ್ಯಯದ ನಂತರ ಅನುದಾನ ನೀಡಿದಲ್ಲಿ ಕಾರ್ಯಾದೇಶ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಬ್ಯಾನರ್ ಮತ್ತು ಬಂಟಿಂಗ್‌ಗಳನ್ನು ತೆರವುಗೊಳಿಸಿರುವ ಬಗ್ಗೆ ವಿವರವನ್ನು ಕೋರಿದರು.

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಬಂಟಿಂಗ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್-136ರ ವ್ಯಾಪ್ತಿಯಲ್ಲಿ ಕೋವಿಡ್-19 ಖಾಯಿಲೆಯಿಂದ ಸತ್ತವರ ಪರಿಹಾರಕ್ಕಾಗಿ ಬಂದಿರುವಂತಹ ಅರ್ಜಿಗಳ ವಿವರವನ್ನು ಕೋರಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಜೆ.ಜೆ.ಆರ್ ನಗರದಲ್ಲಿ ಬಯು.ಜಿ ಸಂಖ್ಯೆ ಇಲ್ಲದೇ ಮೃತಪಟ್ಟಿರುವ ಅರ್ಜಿಗಳಿಗೆ ಬಿ.ಬಿ.ಎಂ.ಪಿ ಮುಖ್ಯ ಕಛೇರಿಯಲ್ಲಿ ಪರಿಶೀಲಿಸಿ ಕುಟುಂಬಗಳಿಗೆ ಚೆಕ್ ಮೂಲಕ ಪರಿಹಾರ ಧನವನ್ನು ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಸದಸ್ಯರು ವಾರ್ಡ್-136ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೆಸ್ಕಾಂಗೆ ಸಂಬಂಧಿಸಿದ ದೂರುಗಳು ಬಂದಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯ ಪಾಲಕ ಅಭಿಯಂತರು(ಬೆಸ್ಕಾಂ) ರವರ ಪ್ರತಿನಿಧಿಯು ಸದರಿ ವಿಷಯದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 136ರ ವ್ಯಾಪ್ತಿಯಲ್ಲಿ ಮಾರ್ಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

ವಾರ್ಡ್-136ರ ಮಾರ್ಷಲ್ ಗಳು ಒಟ್ಟು ವಿಧಿಸಿದ ದಂಡ ರೂ. 6000 ಎಸ್‌ಡಬ್ಲ್ಯೂಎಂ. ದಂಡ ರೂ. 3600 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

---3

ಅಧ್ಯಕ್ಷರು ಡಬ್ಲೂಎಸ್ಎಸ್‌ಬಿ ಕಛೇರಿಗೆ ವಾರ್ಡ್ 136ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್ಎಸ್‌ಬಿ ಅಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ಹಾಗೂ ಮನೆಗಳಿಗೆ ಆಟೋಗಳು ಸಮಯಕ್ಕೆ ಸರಿಯಾಗಿ ಹೊಗುವಂತೆ ನೋಡಿಕೊಳ್ಳಲು ಸಭೆಯಲ್ಲಿ ತಿಳಿಸಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -136ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿ ಸಭೆಯಲ್ಲಿ ನೀಡಿದರು ಹಾಗೂ ಆಟೋಗಳನ್ನು ಪರಿಶೀಲಿಸಿ ಸರಿಯಾದ ಸಮಯಕ್ಕೆ ಕಸ ಸಂಗ್ರಹಣೆ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

ಕಮಿಟಿ ಸದಸ್ಯರು ವಾರ್ಡ್ 136ರ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಸ ಹಾಗೂ ಇತರೆ ತ್ಯಾಜ್ಯ ಹಾಕುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಕಿರಿಯ ಆರೊಗ್ಯ ಪರೀವಿಷಕರನ್ನು ವಿಷಯದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ವಿಷಯವು ಬಂದಿದ್ದು ಸದರಿ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ಬಗ್ಗೆ ನಿಗವಹಿಸುವಂತೆ ಮಾರ್ಷಲ್‌ಗಳಿಗೆ ತಿಳಿಸಿ ಬಿ.ಬಿ.ಎಂ.ಪಿ ನಿಯಮನುಸಾರ ಕ್ರಮ ಕೈಗೊಳ್ಳ ಸಭೆಯಲ್ಲಿ ಹಾಜರಾಗಿದ್ದ ಮಾರ್ಷಲ್‌ಗಳಿಗೆ ಸೂಚಿಸಿದರು.

ಮಾನ್ಯ ಅಧ್ಯಕ್ಷರು  ಅಪ್ತ ಮಿತ್ರ ಸ್ವಯಂ ಸೇವಕರಿಗೆ ಬಿ.ಬಿ.ಎಂ.ಪಿ. ವತಿಯಿಂದ ಉಚಿತ ತರಬೇತಿ ನೀಡಲು ಉದ್ದೇಶಿಸಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಉತ್ಸಹಿ ಯುವಕರನ್ನು ಗುರ್ತಿಸಲು ತಿಳಿಸಿದರು.

ಸಮಿತಿಯ ಸದಸ್ಯರು  ಅಸಕ್ತಿ ಹೊಂದಿರುವ ಯುವಕ/ಯುವತಿಯನ್ನು ಗುರ್ತಿಸಿ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರ ಸಭೆಗೆ ನೀಡುವಂತೆ ಕೋರಿದರು ಹಾಗೂ ಅವಶ್ಯಕವಾಗಿ ನಡೆಯಬೇಕಾದ ಕಾಮಗಾರಿಗಳ ಬಗ್ಗೆ ವಿವರಣೆ ಕೋರಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರವನ್ನು ನೀಡಿದರು ಹಾಗೂ 2021-22ನೇ ಸಾಲಿನ ಕಾರ್ಯಕ್ರಮ ಪಟ್ಟಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ಸಲ್ಲಿಸಿರುವುದಾಗಿ ಸಭೆಯಲ್ಲಿ ವಿವರಣೆ ನೀಡಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮೀತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಡಾ|| ಅಲ್ಲಮಪ್ರಭು, ದೂ. 9480685654<br>ಸಹಾಯಕ ನಿರ್ದೇಶಕರು (ಪಶುಪಾಲನೆ ಪಶ್ಚಿಮ) ಬಿ.ಬಿ.ಎಂ.ಪಿ. | ವಾರ್ಡ್‌ನ ನೋಡಲ್ ಅಧಿಕಾರಿ | 7/2/2022 |
| 2 | ಶ್ರೀ ಸತೀಶ್ ಕುಮಾರ್<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 136<br>ಬಿ.ಬಿ.ಎಂ.ಪಿ ದೂ. 9986740382 | ಸದಸ್ಯ ಕಾರ್ಯದರ್ಶಿ | |
| 3 | ಎನ್. ಲಕ್ಷ್ಮಿ ನರಸಿಂಹಯ್ಯ ದೂ. 9845563157<br>ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -136 | ಸದಸ್ಯರು | |

| | | | |
|---|---|---|---|
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ<br>ಶ್ರೀ ಬಾಬು (ಕೆಲಸ ಪರಿವೀಕ್ಷಕರು) 9342582372 | ಸದಸ್ಯರು | V. B |
| 5 | ಆರೋಗ್ಯಾಧಿಕಾರಿಗಳು, ಚಾಮರಾಜಪೇಟೆ ವಿಭಾಗ ರವರ ಪ್ರತಿನಿಧಿ.<br>ಹಿರಿಯ ಆರೋಗ್ಯಧಿಕಾರಿಗಳು ಜಿ.ಎಂ. ಮುತ್ಯಾಲು<br>ದೂ. 9916444041 | ಸದಸ್ಯರು | GM Muttyalu |
| 6 | ಶ್ರೀ ಉಮೇಶ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ<br>ದೂ. 8735577760 | ಸದಸ್ಯರು | |
| 7 | ಶ್ರೀ ಮೊಹಮದ್ ಮುಜಾಮೀಲ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ<br>ದೂ. 7349649906 | ಸದಸ್ಯರು | |
| 8 | ಶ್ರೀಮತಿ ಚಂದ್ರಕಲಾ ದೂ. 8904845720<br>ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 136 | ಸದಸ್ಯರು | | 
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿಎನ್. ಲಕ್ಷ್ಮಿ ನರಸಿಂಹಯ್ಯ<br>ದೂ. 9845563157 | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ<br>( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಕುಮಾರ ಸ್ವಾಮಿ, ದೂ. 9060341644 | ಸದಸ್ಯರು | |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ ಪ್ರತಿನಿಧಿ | ಸದಸ್ಯರು | |
| 12 | ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆ ಯ ಪ್ರತಿನಿಧಿ<br>ಶ್ರೀ ರಾಮಚಂದ್ರ ಎ. ಎ.ಎಸ್.ಐ ದೂ.9902992624 | ಸದಸ್ಯರು | |
| 13 | ಜೆ.ಜೆ.ಆರ್ ನಗರ ಪೊಲೀಸ್ ಠಾಣೆ ಯ ಪ್ರತಿನಿಧಿ | ಸದಸ್ಯರು | |
| 14 | ವಾರ್ಡ್ 136 ಮಾರ್ಷಲ್, ಮುಬೀನ್ | ಸದಸ್ಯರು | |

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 136
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು 7/2/22
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 136